ಭಿಕ್ಷುಕರಿಗೆ ಪನರ್‌ವಸತಿ ನಿರ್ಮಾಣ

136 (1543) ಶ್ರೀ ಶ್ರೀನಿವಾಸಗೌಡ ಕುದುವನಹಳ್ಳಿ ಕೆ.(ಕೋಲಾರ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದ ಆಸ್ತಿದಾರರಿಂದ ಭಿಕ್ಷುಕರ ಪುನರ್ ವಸತಿ ನಿರ್ಮಾಣಕ್ಕಾಗಿ ಬೆಗ್ಗರ್ಸ್ ನೆಸ್ ವಸೂಲಿ ಮಾಡಲಾಗುತ್ತದೆಯೇ?

ಆ) ವಸೂಲಿ ಮಾಡುತ್ತಿದ್ದಲ್ಲಿ ಇಲ್ಲಿಯವರೆವಿಗೆ ವಸೂಲಾದ ಹಣವೆಷ್ಟು?

ಇ) ವಸೂಲಾದ ಹಣದಿಂದ ಎಷ್ಟು ಜನ ಭಿಕ್ಷುಕರಿಗೆ ಪುನರ್ ವಸತಿ ಒದಗಿಸಲಾಗಿದೆ ಹಾಗೂ ಅದಕ್ಕಾಗಿ ಎಷ್ಟು ಹಣ ಖರ್ಚಾಗಿರುತ್ತದೆ?

ಶ್ರೀ ಎಸ್. ಎಂ.ಕೃಷ್ಣ (ಮುಖ್ಯಮಂತ್ರಿಗಳು)

ಅ) ಹೌದು

ಆ)

ವರ್ಷ	ಭಿಕ್ಷುಕರ ನೆಸ್ ವಸೂಲಾತಿ (ಲಕ್ಷಗಳಲ್ಲಿ)
1997-98	210.42
1998-99	236.06
1999-00	288.00
2000-01	289.00

ಸಾಲಿಗೆ ಫೆಬ್ರವರಿ 2001 ರವರೆಗೆ.

ಇ) ಭಿಕ್ಷುಕರ ಪುನರ್ ವಸತಿ ಸಮಿತಿಯು ಪುರ್ ವಸತಿ ಕಲ್ಪಿಸುವ ಯೋಜನೆಯನ್ನು ಹಮ್ಮಿಕೊಂಡಿರುತ್ತದೆ. ನಗರ ಪಾಲಿಕೆಯ ವತಿಯಿಂದ ಭಿಕ್ಷುಕರ ಪುರ್ ವಸತಿ ಯೋಜನೆ ಹಮ್ಮಿಕೊಂಡಿರುವುದಿಲ್ಲ.

ಭಿಕ್ಷುಕರ ಪುರ್ ವಸತಿ ಸಮಿತಿಗೆ ನೀಡಿದ ಮೊತ್ತದ ವಿವರ ಈ ಕೆಳಕಂಡಂತಿದೆ.

ವರ್ಷ	ಭಿಕ್ಷುಕರ ಪುನರ್‌ವಸತಿ ಸಮಿತಿಗೆ ನೀಡಿದ ಮೊತ್ತ (ಲಕ್ಷಗಳಲ್ಲಿ)
1997-98	179.00
1998-99	284.00
1999-00	38.00
2000-01	20.00
ಸಾಲಿಗೆ ಫೆಬ್ರವರಿ 2001 ರವರೆಗೆ	

ಶ್ರೀ ಕೆ. ಶ್ರೀನಿವಾಸಗೌಡ ಕುದುವನಹಳ್ಳಿ : ಮಾನ್ಯ ಅಧ್ಯಕ್ಷರೇ ನನ್ನ ಮೊದಲನೇ ಪ್ರಶ್ನೆಗೆ ಉತ್ತರವಾಗಿ ಹೌದು ಎಂದು ಹೇಳಿದ್ದಾರೆ. ಇದುವರೆಗೆ 10ಕೋಟಿ 23 ಲಕ್ಷ 43 ಸಾವಿರ ರೂಪಾಯಿಗಳನ್ನು ನೆಸ್ ಮೂಲಕ ವಸೂಲಿ ಮಾಡಿದ್ದಾರೆ. ಹೀಗೆ ವಸೂಲಾದ ಹಣದಿಂದ ಭಿಕ್ಷುಕರ ಪುರ್‌ವಸತಿ ಮಾಡಲಾಗಿದೆಯೇ ಎನ್ನುವುದಕ್ಕೆ, ನಗರಪಾಲಿಕೆ ವತಿಯಿಂದ ಭಿಕ್ಷುಕರ ಪುರ್‌ವಸತಿಯೋಜನೆಯ ಹಮ್ಮಿಕೊಂಡಿರುವುದಿಲ್ಲ ಎಂದು ಹೇಳಿದ್ದಾರೆ. ಭಿಕ್ಷುಕರ ಪುರ್‌ವಸತಿಗೆ ಸರ್ಕಾರ ಏನೇನು ಕ್ರಮಗಳನ್ನು ಜರುಗಿಸಿದೆ ಎನ್ನುವುದು ನನ್ನ ಮೂಲ ಪ್ರಶ್ನೆಯಾಗಿತ್ತು. ಇದುವರೆಗೆ ವಸೂಲಾದ ನದಲ್ಲಿ ಇವರು ಖರ್ಚು ಮಾಡಿರುವುದು 4 ಕೋಟಿ 61 ಸಾವಿರ ರೂಪಾಯಿಗಳನ್ನು ಮಾತ್ರ. ನಮ್ಮ ಕಡೆ ಒಂದು ಗಾದೆ ಮಾತು ಹೇಳುತ್ತಾರೆ. 'ತಿಂದುಕೊಂಡು ತಿನ್ನುವವನ ಹತ್ತಿ ಕೆರೆದುಕೊಂಡು ತಿಂದ' ಎಂದು. ಹಾಗೆ, ತಿಂದುಕೊಂಡು ತಿನ್ನುವವರಿಗಾಗಿ ವಸುಲಾದ ಹಣಭದಲ್ಲೂ ಸರ್ಕಾರ ಕೆರೆದುಕೊಂಡು ತಿನ್ನುತ್ತಿದೆ. ಇದು ಯಾವ ನ್ಯಾಯ? ದಯವಿಟ್ಟು ಇದಕ್ಕೆ ಉತ್ತರ ಕೊಡಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಈ ಸೆಸ್‌ನ್ನು ಕಾರ್ಪೊರೇಷನ್‌ನವರು ಕಲೆಕ್ಟ್ ಮಾಡುತ್ತಾರೆ. ಆದರೆ ಈ ಹಣ ಖರ್ಚು ಮಾಡುವವರು ಸಮಾಜ ಕಲ್ಯಾಣ ಇಲಾಖೆಯಲ್ಲಿರುವ ಬೆಗ್ಗರ್ಸ್ ರಿಲಿಫ್ ಕಮಿಟಿಯವರು. ಅವರು ಭಿಕ್ಷುಕರ ಕಲ್ಯಾಣಕ್ಕೋಸ್ಕರ ಯಾವಯಾವ ಯೋಜನೆಗಳನ್ನು ಹಾಕಿಕೊಳ್ಳಬೇಕು. ಯಾವಯಾವ ಕ್ರಮವನ್ನು ತೆಗೆದುಕೊಳ್ಳಬೇಕು ಎನ್ನುವುದನ್ನು ರೂಪಿಸುತ್ತಾರೆ. ಆದ್ದರಿಂದ, ಈ ಬಗ್ಗೆ ಕಾರ್ಯಕ್ರಮ ಹಾಕಿಕೊಳ್ಳುವಂಥವರು ಸಮಾಜ ಕಲ್ಯಾಣ ಇಲಾಖೆಯವರು. ಕಮಿಟಿಯ ಅಧ್ಯಕ್ಷರೇ, ಈಗ ಇಲಾಖೆಯ ಕಾರ್ಯದರ್ಶಿಗಳಾಗಿದ್ದಾರೆ. ಆದ್ದರಿಂದ ಸಮಾಜ ಕಲ್ಯಾಣ ಇಲಾಖೆಗೆ ಈ ಪ್ರಸ್ನೆಯನ್ನು ಕೆಳಿದ್ದರೆ ಸರಿಯಾಗುತ್ತಿತ್ತು. ಆದರು ಈ ಗ ಕಲೆಕ್ಟ ಆಗಿರತಕ್ಕಂಥಾದ್ದರಲ್ಲಿ ಇನ್ನೂ 5 ಕೋಟಿ 72 ಲಕ್ಷ ರೂಪಾಯಿ ಬಾಕಿ ಖರ್ಚು ಮಾಡುವುದು ಇದೆ. ಇದು 1997-98, 1998-99, 1999-2000 ಮತ್ತು 2000-2001 ಈ ಐದು ವರ್ಷಗಳ ಬಾಕಿ. ಈ ವರ್ಷ ಖಂಡಿತವಾಗಿ 50 ಲಕ್ಷ ರೂಪಾಯಿ ಬಿಡುಗಡೆ ಮಾಡತಕ್ಕಂಥಾದ್ದನ್ನು ಸರ್ಕಾರ ಮಾಡುತ್ತದೆ ಎನ್ನುವ ಮಾತನ್ನು ಹೇಳುತ್ತೇವೆ. ಹಿಂದಿನ ಬಾಕಿ ಎಲ್ಲವನ್ನೂ ಒಂದೇ ಸಲ ಕೊಡಲು ಆಗುವುದಿಲ್ಲ. ಈಗಾಗಲೇ ಹೆಚ್ಚು ಕಡಿಮೆ ಕಾರ್ಪೊರೇಷನ್‌ರವರು ಖರ್ಚು ಮಾಡಿದ್ದಾರೆ.

ಶ್ರೀ ಎಸ್. ಸುರೇಶ್‌ಕುಮಾರ್ : ಸನ್ಮಾನ್ಯ ಅಧ್ಯಕ್ಷರೇ, ಬೆಂಗಳೂರಿನಲ್ಲಿ ಟ್ಯಾಕ್ಸ್ ಪೇಯರ್ಸ್ ಅಸೋಸಿಯೇಷನ್ನಿನಿಂದ ಈ ಬೆಗ್ಗರ್ಸ್ ನೆಸ್ ಎನ್ನುವುದು ಪ್ರಾರಂಭವಾಯಿತು. ಬೆಂಗಳೂರಿನಲ್ಲಿ ಬೆಗ್ಗರ್ಸ್ ಇರಬಾರದು ಅವರಿಗೆ ಪುನರ್‌ವಸತಿ ಕಲ್ಪಿಸಬೇಕು ಎನ್ನುವ ಉದ್ದೇಶದಿಂದ ಬೆಗ್ಗರ್ಸ್ ನೆಸ್ ಕಲೆಕ್ಟ್ ಮಾಡಲಾಗುತ್ತಿದೆ. ಆದರೆ ಬೆಂಗಳೂರಿನಲ್ಲಿ ಭಿಕ್ಷೆ ಬೇಡುವವರ ಸಂಖ್ಯೆ ಕಡಿಮೆಯಾಗಿಲ್ಲ. ಜೈಲ್ಡ್ ಲೇಬರ್‌ಗಳಿರುವಂತೆ, ಜೈಲ್ಡ್ ಬೆಗ್ಗರ್‌ಗಳು ಬೆಂಗಳೂರಿನಲ್ಲಿದ್ದಾರೆ. ಅದರಲ್ಲೂ ಕಾಂಟ್ರಾಕ್ಟ್ ಇರುತ್ತದೆ. ಬೆಳಿಗ್ಗೆಯಿಂದ ಕಲೆಕ್ಟ್ ಮಾಡದಂಥಾದ್ದರಲ್ಲಿ ಮಾಫಿಯಾದವರಿಗೆ ಇಂತಿಷ್ಟು ಎಂದು ಕೊಡಬೇಕು. ಈ ರೀತಿಯ ಪರಿಸ್ಥಿತಿ ಇರುವಾಗ ಭಿಕ್ಷುಕರಿಗೆ ಪುರ್‌ವಸತಿ ಮಾಲು ಆಗದಿದ್ದರೆ ನೀವು ಬೆಗ್ಗರ್ಸ್ ನೆಸ್‌ಅನ್ನು ಏಕೆ ಕಲೆಕ್ಟ್ ಮಾಡುತ್ತೀದ್ದೀರಿ? ಎಂ.ಜಿ ರಸ್ತೆ ಅಥವಾ ಯಾವುದೇ ಒಂದು ಸರ್ಕಲ್‌ಗೆ ಹೋಗಿ ನೋಡಿ. ಅಲ್ಲಿ 2-3 ತಿಂಗಳ ಎಳೆಯ ಮಕ್ಕಳನ್ನು ಎತ್ತೋಂಡು ಭಿಕ್ಷುಕರು ಇರುತ್ತಾರೆ ಮತ್ತು 4-5-8 ವರ್ಷದ ಮಕ್ಕಳೂಗಳೂ ಭಿಕ್ಷುಕರಾಗಿರುತ್ತಾರೆ. ಪರಿಸ್ಥಿತಿ ಹೀಗಿರುವಾಗ ಈ ಬೆಗ್ಗರ್ಸ್ ನೆಸ್‌ಅನ್ನು ಕಲೆಕ್ಟ್ ಮಾಡಲು ನಿಮಗೆ ಯಾವ ಅರ್ಹತೆ ಇದೆ, ಯಾವ ಹಕ್ಕು ಇದೆ?

ಶ್ರೀ ಕಾಗೋಡು ತಿಮ್ಮಪ್ಪ : ಬೆಗ್ಗರ್ಸ್ ನೆಸ್‌ನ್ನು ಕಲೆಕ್ಟ್ ಮಾಡಲು ಎಲ್ಲ ಅರ್ಹತೆಯೂ ನಮಗೆ ಇದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅವರು ಕಾರ್ಪೊರೇಟರ್, ಶಾಸಕರಾಗಿ ಈ ನೆಸ್ ಹಾಕಿ ಎಂದು ನಮಗೆ ಹೇಳಿದ್ದರು. ನಿಮಮ ಹೇಳಿಕೆಯ ಪ್ರಕಾರ ನಾವು ಹಾಕುತ್ತಿದ್ದೇವೆ.

ಶ್ರೀ ಕೆ.ಶ್ರೀನಿವಾಸಗೌಡ ಕುಮುವನಹಳ್ಳಿ : ಬೆಂಗಳೂರಿನ ಆಸ್ತಿದಾರರಿಂದ ನೆಸ್ ವಸೂಲಿ ಮಾಡುತ್ತಿದ್ದಾರೆ. ಬೆಂಗಳೂರಿನಲ್ಲಿ ಭಿಕ್ಷುಕರು ಇರಬಾರದು ಎನ್ನುವ ಉದ್ದೇಶದಿಂದ ಅವರು ನಿಮಗೆ ನೆಸ್ ಕೊಡುತ್ತಾರೆ. ಆದರೆ ಪ್ರತಿದಿನ ಬೆಳಗಾದರೆ ಯಾವ ಸರ್ಕಲ್‌ನಲ್ಲಿ ನೋಡಿದರೂ ಭಿಕ್ಷುಕರು ಭಿಕ್ಷೆ ಬೇಡುವುದು ನಿಂತಿಲ್ಲ. ಹಾಗಾದರೆ ನೀವು ಏತಕ್ಕೋಸ್ಕರ ನೆಸ್ ಕಲೆಕ್ಟ್ ಮಾಡುತ್ತಿದ್ದೀರಿ. ಅದನ್ನು ನಿಲ್ಲಿಸಿಬಿಡಿ. ಅವರಿಗೂ ತೊಂದರೆಯಾಗುವುದು ಬೇಡ. ಅವರು ಎಲ್ಲಿ ಬೇಕೋ ಅಲ್ಲಿ ತಿಂದುಕೊಂಡು ತಿನ್ನಲಿ.

ಶ್ರೀ ಕಾಗೋಡು ತಿಮ್ಮಪ್ಪ : ಭಿಕ್ಷಾಟನೆಯನ್ನು ನಿಲ್ಲಿಸಬೇಕಾದಂಥ ಅಗತ್ಯ ಇದೆ. ನಾವೂ ಆ ಪ್ರಯತ್ನದಲ್ಲಿದ್ದೇವೆ. ಇದಕ್ಕಾಗಿ ಕಾರ್ಪೊರೇಷನ್ನಿನವರು ವಸೂಲು ಮಾಡತಕ್ಕಂಥ ಹಣದಲ್ಲಿ ಬಹಳಷ್ಟು ಹಣವನ್ನು ಕೊಟ್ಟಿಲ್ಲ. ಸುಮಾರು 6-7 ಕೋಟಿ ರೂಪಾಯಿ ಅವರ ಹತ್ತಿರ ಇದೆ. ಈ ಬಗ್ಗೆ ನಾನು ಸ್ವಲ್ಪದಿವಸದ ಹಿಂದೆ ವಿಚಾರ ಮಾಡಿದ್ದು ಸ್ವತಃ ಕಮೀಷನರ್‌ರವರನ್ನು ಕರೆಸಿ ಮಾತನಾಡಿದ್ದೇನೆ. ಬೆಂಗಳೂರು ಭಿಕ್ಷಾಟನಾ ರಹಿತವಾದಂಥ ಕ್ಷೇತ್ರ ಎಂದು ಈಗಾಗಲೇ ಒಂದು ಹಂತದಲ್ಲಿ ಡಿಕ್ಲೇರ್ ಮಾಡಿ ಅದಕ್ಕೆ ಕಾರ್ಯಾಚರಣೆಯನ್ನು ಮಾಡುತ್ತಿದ್ದೇವೆ. ಅದು ಸ್ವಲ್ಪಮಟ್ಟಿಗೆ ಯಶಸ್ವಿಯಾಗಿದೆ. ಕೆಲವು ಕಡೆ ಭಿಕ್ಷುಕರನ್ನು ಹಿಡಿಯಲು ಆಗುತ್ತಿಲ್ಲ. ಏಕೆಂದರೆ ನಾವು ಬರುವ ಸಮಯದಲ್ಲಿ ಅವರು ತಪ್ಪಿಸಿಕೊಳ್ಳುತ್ತಿದ್ದಾರೆ. ಭಿಕ್ಷಾಟನೆ ನಿಲ್ಲಿಸಲು ನಿಮಗೆ ಎಷ್ಟು ಆಸಕ್ತಿ ಇದೆಯೋ, ನಾವೂ ಅಷ್ಟೇ ಆಸಕ್ತಿಯಿಂದ ಕೆಲಸ ಮಾಡುತ್ತಿದ್ದೇವೆ.

ಶ್ರೀ ಎಸ್. ಸುರೇಶ್ ಕುಮಾರ್ : ಶಾಸಕರ ಭವನದಲ್ಲಿ ಭಿಕ್ಷುಕರು ಇದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ: ನೀವು ಹೇಳತಕ್ಕಂಥ ಮಾತು ಸರಿ. ಅದು ನಮ್ಮ ಗಮನಕ್ಕೂ ಬಂದಿದೆ. ಅದಕ್ಕಾಗಿ ಇನ್ನೂ ಬಲಯುತವಾದ ವ್ಯವಸ್ಥೆ ಮಾಡುತ್ತೇವೆ. ಪೋಲೀಸಿನವರ ನೆರವಿಲ್ಲದೇ ನಾವು ಇದನ್ನು ಮಾಡಲು ಆಗುವುದಿಲ್ಲ. ಇದಕ್ಕೋಸ್ಕರ ಬೆಂಗಳೂರು ನಗರದಲ್ಲಿ ವಿಶೇಷವಾದಂಥ ಒಂದು ವ್ಯಾನ್ ಅನ್ನು ಕೂಡ ನಾವು ಇಟ್ಟಿದ್ದೇವೆ. ಇಂಥ ಕಡೆ ಭಿಕ್ಷುಕರ ಇದ್ದಾರೆ ಎನ್ನುವುದು ನಿಮ್ಮ ಗಮನಕ್ಕೆ ಬಂದ ಕೂಡಲೇ ಸೆಂಟರ್‌ಗೆ ಫೋನ್ ಮಾಡಿದರೆ ಅಲ್ಲಿಂದ ತಕ್ಷಣ ವ್ಯಾನ್ ಅನ್ನು ಕಳುಹಿಸಿತಕ್ಕಂಥ ವ್ಯವಸ್ಥೆಯನ್ನು ಮಾಡಿದ್ದೇವೆ. ಇನ್ನೂ ಮಾಡಬೇಕಾದ ಅಗತ್ಯವಿದೆ. ನಾನು ಬರತಕ್ಕಂಥ ರಸ್ತೆಯಾದ ಮಿನರ್ವ ಸರ್ಕಲ್‌ನಲ್ಲೂ ಅದು ನಿಂತಿತ್ತು, ವಿಧಾನಸೌಧದ ಹತ್ತಿರ ಕೂಡ ನಿಂತಿತ್ತು. ನಿನ್ನೆ ರಾತ್ರಿ 8.00 ಗಂಟೆಯಲ್ಲಿ ನಾನು ಮಿನರ್ವ ಸರ್ಕಲ್ ಹತ್ತಿರ ಹೋಗುವಾಗ ನೋಡಿದೆ, ಅಲ್ಲಿ ಸಣ್ಣ ಮಕ್ಕಳು ಇದ್ದರು. ನಾವು ಎಲ್ಲರಿಗೂ ಒಂದು ಫೋನ್ ನಂಬರ್ ಅನ್ನು ಕಳುಹಿಸಿಕೊಡುತ್ತೇವೆ. ನಿಮ್ಮ ಗಮನಕ್ಕೆ ಭಿಕ್ಷುಕರು ಬಂದ ತಕ್ಷಣ ಅಲ್ಲಿಗೆ ಆ ಸುದ್ದಿ ತಿಳಿಸತಕ್ಕಂಥ ಕೆಲಸ ಮಾಡಿದರೆ ಅನುಕೂಲವಾಗುತ್ತದೆ. ಅದನ್ನು ಶಾಸಕರೂ ಮಾಡಬೇಕಾಗುತ್ತದೆ, ಸಾರ್ವಜನಿಕರೂ ಮಾಡಬೇಕಾಗುತ್ತದೆ. ನಾವು ತಕ್ಷಣ ಅಲ್ಲಿಗೆ ಸಿಬ್ಬಂದಿಯನ್ನು ಕಳುಹಿಸಿ ಅವರನ್ನು ದಸ್ತಗಿರಿ ಮಾಡಿ ಕರೆದುಕೊಂಡು ಹೋಗುತ್ತೇವೆ. ಬೆಂಗಳೂರಿನಲ್ಲಿ ಹಿಂದೆ ಮಹಾರಾಜರ ಕಾಲದಲ್ಲಿ ಮಾಡಿರತಕ್ಕಂಥ ಒಂದು ಉತ್ತಮವಾದಂಥ ಪ್ರದೇಶವಿದೆ. ಅದನ್ನು ಅಭಿವೃದ್ಧಿ ಮಾಡಲು ನಾನು ಪ್ರಯತ್ನ ಪಟ್ಟಿದ್ದೇನೆ. ಆದ್ದರಿಂದ, ಇದರ ಬಗ್ಗೆ ನಿಮಗೆ ಎಷ್ಟು ಕಳಕಳಿ, ಕನ್‌ಸರ್ನ್ ಇದೆಯೋ, ಅಷ್ಟೇ ಕನ್‌ಸರ್ನ್ ನಮಗೂ ಇದೆ. ಆದರೂ ಭಿಕ್ಷಾಟನೆ ಎನ್ನುವುದು ಸ್ವಲ್ಪ ನಡೆಯುತ್ತಿದೆ. ಇಲ್ಲ ಎಂದೇನೂ ಅಲ್ಲ. ಇದು ಎಷ್ಟೋ ವರ್ಷಗಳಿಂದ ನಡೆದುಕೊಂಡು ಬಂದಿರುವಂಥಾದ್ದು. ಬೆಂಗಳೂರಿಗೆ ಭಿಕ್ಷಾಟನೆಗಾಗಿ ತಮಿಳುನಾಡು ಮತ್ತು ಆಂಧ್ರಪ್ರದೇಶದಿಂದ ಬರತಕ್ಕಂಥವರು ಜಾಸ್ತಿ ಇದ್ದಾರೆ. ನಮ್ಮಲ್ಲಿ ಸುಮಾರು 400 ಜನರು ಇರುವುದಕ್ಕೆ ಸ್ಥಳಾವಕಾಶ ಇದೆ. ಸುಮಾರು ಆರು ತಿಂಗಳಿಂದ ಸ್ವಲ್ಪ ಮಾಡಿರುವುದರಿಂದ ಇವತ್ತು ಜನ ಜಾಸ್ತಿಯಾಗಿ ಮೈಸೂರಿಗೆ ಕೂಡ ನಾವು ಕಳುಹಿಸಿಕೊಡುತ್ತಿದ್ದೇವೆ. ಮತ್ತು ತಮಿಳುನಾಡು, ಆಂಧ್ರಪ್ರದೇಶದಿಂದ ಬಂಧಂಥವರನ್ನು ವಾಪಸ್ಸು ಕಳುಹಿಸಿಕೊಡುತ್ತಿದ್ದೇವೆ. ಅವರು ಮತ್ತೆ ವಾಪಸ್ಸು ಬರುತ್ತಾರೆ. ಆದ್ದರಿಂದ ಭಿಕ್ಷಾಟನೆ ಇಲ್ಲದ ಹಾಗೆ ಮಾಡುವುದಕ್ಕೆ ಪ್ರಯತ್ನ ನಡೆಯುತ್ತಿದೆ. ಬಹುಶಃ ಪರಿಪೂರ್ಣ ಆಗದೇ ಇರಬಹುದು ಅದನ್ನು ನಾನು ಒಪ್ಪುತ್ತೇನೆ. ಆ ದಿಶೆಯಲ್ಲಿ ಕೆಲಸ ಮಾಡುತ್ತಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಮಾನ್ಯ ಅಧ್ಯಕ್ಷರೆ, ಈ ಕೆಲಸವನ್ನು ಸಮಾಜ ಕಲ್ಯಾಣ ಇಲಾಖೆ ಒಂದೇ ಮಾಡತಕ್ಕಂಥಾದ್ದಲ್ಲ. This is a joint operation of the Corporation, Social Welfare Department and the Home (Police) Department. ಈ ಮೂರು ಇಲಾಖೆಗಳೂ ಸಹ ಒಟ್ಟಗೆ ಸೇರಿ ಈ ಕೆಲಸವನ್ನು ಮಾಡಬೇಕಾಗಿದೆ. ನಾನು ಇದನ್ನು ಸಮಾಜ ಕಲ್ಯಾಣ ಇಲಾಖೆಯ ಸಚಿವನಾಗಿ, ಗೃಹ ಇಲಾಖೆಯ ಸಚಿವನಾಗಿಯೂ ನೋಡಿದ್ದೇನೆ ಶ್ರೀ ಕಾಗೋಡು ತಿಮ್ಮಪ್ಪನವರು ಮಾತನಾಡುತ್ತಾ - 'ನಾವು ಆ ಭಿಕ್ಷುಕರನ್ನು ಎತ್ತಿಕೊಂಡು ಹೋಗಬೇಕಾದರೆ ಪೋಲೀಸರ ಸಹಕಾರ ಬೇಕೆಂದು' ಹೇಳಿದರು. ಇಲ್ಲಿ ತೊಂದರೆ ಏನಿದೆ ಎಂದರೆ- ಪೋಲೀಸ್ ವಾಹನಗಳ ಪೆಟ್ರೋಲ್‌ಗೆ ಸರ್ಕಾರದಲ್ಲಿ ಹಣವೇ ಇಲ್ಲ. ಅದರಿಂದಾಗಿ ಮಾನ್ಯ ಗೃಹಸಚಿವರಿಗೆ, ಸರ್ಕಾರಕ್ಕೆ ಹೇಳುವುದೇನೆಂದರೆ- ಬೆಂಗಳೂರು ಸಿಟಿ ಕಾರ್ಪೊರೇಷನ್‌ನವರು ಸುಮಾರು 7-8 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುವುದಿದೆ. ಪ್ರತೀ ವರ್ಷ ಅವರು ಆ ಹಣವನ್ನು ಬಿಡುಗಡೆ

ಮಾಡುತ್ತಿಲ್ಲ. ಆ ನಿರಾಶ್ರಿತರ ಪರಿಹಾರ ಕೇಂದ್ರದ ಅಧ್ಯಕ್ಷ ಕಾರ್ಪೊರೇಷನ್ ಕಮಿಷನರ್ ಪಾದವನ್ನು ಮುಟ್ಟಿ, ನನಗೆ ತಿಂಗಳ ಸಂಬಳ ಬಂದಿಲ್ಲ, ನನ್ನ ಕಾರಿಗೆ ಪೆಟ್ರೋಲ್ ಇಲ್ಲ' ಎಂದು ಭಿಕ್ಷೆ ಬೇಡುತ್ತಾನೆ. ಇದರ ಅಧ್ಯಕ್ಷ ಸಮಾಜ ಕಲ್ಯಾಣ ಇಲಾಖೆಯ ಕಾರ್ಯದರ್ಶಿಯಾಗಿರುವುದರಿಂದ ಆ ತೊಂದರೆ ಏನೂ ಬರುವುದಿಲ್ಲ. ಆದ್ದರಿಂದ ತಾವು ನಿಜವಾಗಿಯೂ ಇದನ್ನು ಮಾಡಬೇಕು ಎನ್ನುವ ಕಾರ್ಯಕ್ರಮವನ್ನು, ತಮ್ಮ ಉದ್ದೇಶವನ್ನು ನಾನು ಪ್ರಶ್ನೆ ಮಾಡುತ್ತಿಲ್ಲ. ನಾನು ಒಂದು ಸಲಹೆಯನ್ನು ಸರ್ಕಾರಕ್ಕೆ ಕೊಡುವುದಕ್ಕೆ ಬಯಸುತ್ತೇನೆ. ಅದನ್ನು ಮಾಡಲಿಕ್ಕೆ ಸಾಧ್ಯವೇ ಎಂಬುದನ್ನು ಪರಿಶೀಲನೆ ಮಾಡಿ ನೋಡಿ. ಅದೇನೆಂದರೆ- ನಿರಾಶ್ರಿತರ ಪರಿಹಾರ ಕೇಂದ್ರ ಕೇವಲ ಬೆಂಗಳೂರಿನಲ್ಲಿ ಮಾತ್ರ ಇರುವುದಿಲ್ಲ. ರಾಜ್ಯದ 27 ಜಿಲ್ಲೆಗಳಲ್ಲೂ ಪ್ರಾರಂಭ ವಾಗಬೇಕು. 16-17 ಜಿಲ್ಲೆಗಳಲ್ಲಿ ಪರಿಹಾರ ಕೇಂದ್ರ ಆಗಿದೆ. ಬಾಕಿ ಕಡೆ ಕೂಡ ಮಾಡಿಸಬೇಕು. ಇದೆಲ್ಲಾ ಮಾಡಿಸಬೇಕಾದರೆ ಸರ್ಕಾರಕ್ಕೆ ಹಣ ಬೇಕಾಗುತ್ತದೆ. ಆ ಹಣವನ್ನು ಕಾರ್ಪೊರೇಷನ್ ಪ್ರತೀ ತಿಂಗಳು ಸಹಿತ ರಿಲೀಸ್ ಮಾಡುವ ಹಾಗೆ ಮಾಡುವುದಕ್ಕೆ ಸಾಧ್ಯವೇ? ಇದನ್ನು ಹೇಳಬೇಕು.

ಶ್ರೀ ಸಿ. ಬೈರೇಗೌಡ: ಮಾನ್ಯ ಅಧ್ಯಕ್ಷರೆ, ಪರಿಸ್ಥಿತಿ ಏನಿದೆ ಎಂದರೆ...

ಅಧ್ಯಕ್ಷರು: ಶ್ರೀ ಬೈರೇಗೌಡರೆ, ನಮಗೆ ವಿವರ ಬೇಕಾಗಿಲ್ಲ. ನಾವು ಈಗಾಗಲೇ ಪ್ರಶ್ನೋತ್ತರ ವೇಳೆಗಾಗಿ ನಿಗದಿತ ಸಮಯಕ್ಕಿಂತ 40 ನಿಮಿಷಕ್ಕಿಂತಲೂ ಹೆಚ್ಚು ಸಮಯವನ್ನು ತೆಗೆದುಕೊಂಡಿದ್ದೇವೆ. ದಯವಿಟ್ಟು ಕ್ಷಮಿಸಬೇಕು.

(ಗೊಂದಲ)

ಅಧ್ಯಕ್ಷರು: ಶ್ರೀ ಶ್ರೀನಿವಾಸಗೌಡರು ಲೇಟಾಗಿ ಬಂದು ಪ್ರಶ್ನೆ ಕೇಳಿ ಉತ್ತರ ಪಡೆಯಲು ಹದಿನೈದು ನಿಮಿಷತೆಗೆದುಕೊಂಡಿದ್ದಾರೆ. ಒಂದೇ ಒಂದು ಪ್ರಶ್ನೆ ಕೇಳಿ ಅದಕ್ಕೆ ಹನ್ನೆರಡು ಉಪಪ್ರಶ್ನೆಗಳನ್ನು ಕೇಳುತ್ತಾ ಇದ್ದರೆ ಬೇರೆ ವಿಷಯಗಳನ್ನು ಚರ್ಚೆಗೆ ಯಾವಾಗ ಎತ್ತಿಕೊಳ್ಳುವುದು? ದಯವಿಟ್ಟು ಕ್ಷಮಿಸಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, 'ಪೊಲೀಸ್ ಇಲಾಖೆ, ಸಮಾಜ ಕಲ್ಯಾಣ ಇಲಾಖೆ ಮತ್ತು ಕಾರ್ಪೊರೇಷನ್ ಜಾಯಿಂಟ್ ವಿಚಾರವಾಗಿದೆ. ಅವರ ಸರ್ಕಾರ ಇದ್ದಾಗಲೂ ಹಾಗೆಯೇ ಮಾಡಿದ್ದು. ಈಗಲೂ ಹಾಗೆಯೇ ಮಾಡುತ್ತಿರತಕ್ಕಂಥಾದ್ದು ಆಗಿದೆ. ನೆಸ್ ಡ್ಯೂಸ್ ಹಿಂದಿನಿಂದಲೇ ಬಂದಿದೆ. ಈ ಸರ್ಕಾರ ಬಂದ ಮೇಲೆ ಡ್ಯೂಸ್ ಆಗಿರತಕ್ಕಂಥದ್ದು ಅಲ್ಲ. ಹಿಂದಿನ ಸರ್ಕಾರ ಎಲ್ಲಾ ಸೇರಿ ಇವತ್ತು ಸುಮಾರು 5 ಕೋಟಿ ರೂಪಾಯಿಗಳಷ್ಟು ಬಾಕಿ ಉಳಿದಿದೆ. ಅದಕ್ಕಾಗಿ ಈಗ ಸುಮಾರು 50 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡತಕ್ಕಂಥದ್ದನ್ನು ನಾವು ಮಾಡುತ್ತೇವೆ. ಅದಕ್ಕೆ ಉಳಿದಂಥ ಕಾರ್ಯಕ್ರಮವನ್ನು ಸಮಾಜ ಕಲ್ಯಾಣ ಇಲಾಖೆ ತೆಗೆದುಕೊಳ್ಳಲಿ ಎಂದು ನಾನು ಹೇಳಿದ್ದೇನೆ. ಇನ್ನು ಪೊಲೀಸ್ ಇಲಾಖೆಯಲ್ಲಿ ಪೆಟ್ರೋಲ್ ಹಾಕಿಸುವುದಕ್ಕೆ ಹಣ ಇಲ್ಲ ಅದಕ್ಕೋಸ್ಕರ ಪೊಲೀಸ್ ವಾಹನಗಳು ಹೋಗುವುದಿಲ್ಲ ಎಂದು ಹೇಳಿದ್ದಿರಿ. ಸಾಕಷ್ಟು ಹಣವನ್ನು ಇಲಾಖೆಗೆ ಕೊಟ್ಟಿದ್ದೇವೆ ಮತ್ತು ಹಿಂದೆ ಬಾಕಿ ಉಳಿದಿದ್ದುದನ್ನು ಕೂಡ ಕೊಟ್ಟಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ನಾವು ವಿಧಾನಸೌಧಕ್ಕೆ ಪ್ರವೇಶ ಮಾಡುವ ಬಾಗಿಲುಗಳ ಹತ್ತಿರ ಕರ್ತವ್ಯ ನಿರ್ವಹಿಸುತ್ತಿರುತವಂಥ ಪೊಲೀಸ್ ಪೇದೆಗಳಿಗೆ ನಾಲ್ಕು ತಿಂಗಳುಗಳಿಂದ ರೇಷನ್ ಕೊಟ್ಟಿಲ್ಲ. ಅವರುಗಳು ಒಂದೇ ಕಣ್ಣಿನಲ್ಲಿ ಅಳುತ್ತಿದ್ದಾರೆ. ಅವರ ಜೀಪುಗಳಿಗೆ ಪೆಟ್ರೋಲ್ ಇಲ್ಲ. ಇದರ ಬಗ್ಗೆ ಪ್ರತ್ಯೇಕವಾಗಿ ಒಂದು ಸಲ ಚರ್ಚೆ ಮಾಡೋಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಆಳುವಾಗ ಎರಡೂ ಕಣ್ಣಿನಲ್ಲಿ ನೀರು ಬರುತ್ತದೆ. ಒಂದು ಕಣ್ಣಿನಲ್ಲಿ ಅಲ್ಲ. ಒಂದು ಕಣ್ಣು ಇರುವವರಿಗೆ ಮಾತ್ರ ಒಂದು ಕಣ್ಣಲ್ಲಿ ನೀರು ಬರುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಈ ರೀತಿ ಮಾನ್ಯ ಖರ್ಗೆಯವರು ಗೃಹಸಚಿವರಾದಂಥ ಕಾಲದಲ್ಲಿ ಆಗಬಾರದಿತ್ತು ಎಂದು ಹೇಳುತ್ತಿದ್ದೇನೆ ಅಷ್ಟೆ. ನೀವು ವಿರೋಧ ಪಕ್ಷದಲ್ಲಿ ನಿಂತುಕೊಂಡು ಮಾತನಾಡುವಾಗ ನಿಮ್ಮ ಕಣ್ಣಿನಲ್ಲಿ ನೀರು ಸುರಿಯುತ್ತಿತ್ತಲ್ಲಾ, ಅದರಿಂದ ಹೇಳುತ್ತಿದ್ದೇನೆ ಅಷ್ಟೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಹಣ ಬಿಡುಗಡೆ ಮಾಡಿದ್ದೇನೆ. ಕಮಿಷನರ್ ಮತ್ತು ಡಿಸಿಪಿಯವರಿಗೆ ಪವರ್ಸ್ ಹೆಚ್ಚಿಗೆ ಮಾಡಿದ್ದೇವೆ. ಅವರನ್ನು ನಾವು ಸ್ವಲ್ಪ ಕೇಳಿದರೆ ಗೊತ್ತಾಗುತ್ತದೆ. ಅದರದೇನೂ ತಾಪತ್ರಾಯ ಇಲ್ಲ, ಸ್ವಲ್ಪ ವ್ಯತ್ಯಾಸ ಇತ್ತು. ಅದನ್ನು ಸರಿಪಡಿಸಿದ್ದೇವೆ. ಅದಕ್ಕೆ ಉಳಿದ ಹಣವನ್ನು ಕೊಡತಕ್ಕಂಥ ವ್ಯವಸ್ಥೆ ಮಾಡುತ್ತೇವೆ. ಈ ಭಿಕ್ಷುಕರ ಕಾಟ ಆಂಧ್ರಪ್ರದೇಶದಿಂದ ಮತ್ತು ತಮಿಳುನಾಡಿನಿಂದ ಬರತಕ್ಕಂಥ ಜನರಿಂದ ನಿಜವಾಗಿ ಆಗರತಕ್ಕಂಥದ್ದು. ಅವರನ್ನು ಅನೇಕ ಸಲ ವಾಪಾಸ್ಸು ಕಳುಹಿಸಿಕೊಡುತ್ತೇವೆ, ಪುನಃ ಅವರಿ ಇಲ್ಲಿಗೆ ಬರುತ್ತಾರೆ. ಬಹುಶಃ ಆ ಭಿಕ್ಷುಕರನ್ನು ಇಲ್ಲಿನ ಜನ ನೋಡಿದ ತಕ್ಷಣವೇ ಹಣ ಕೊಡುತ್ತಾರೆಂದು ಕಾಣುತ್ತದೆ. ಅದಕ್ಕೋಸ್ಕರ ಬೆಂಗಳೂರಿನಲ್ಲಿ ಇನ್‌ಕಂ ಜಾಸ್ತಿ ಇದೆ ಎಂದು ಬರುತ್ತಿದ್ದಾರೆ. ಅದಕ್ಕೆ ಏನು ವ್ಯವಸ್ಥೆ ಮಾಡಬೇಕೆನ್ನುವುದಕ್ಕೆ ಪೋಲೀಸರಿಗೆ ಕೂಡ ನಾನು ಆದೇಶ ಕೊಡುತ್ತೇನೆ. ಮತ್ತು ಸಮಾಜ ಕಲ್ಯಾಣ ಇಲಾಖೆಯಲ್ಲಿ, ಭಿಕ್ಷುಕರಿಗಾಗಿ ಸ್ಪೆಶಿಯಸ್ ಆಗಿ ಲ್ಯಾಂಡ್ ಇದೆ, ಆ ಲ್ಯಾಂಡ್‌ನಲ್ಲಿ ಈ ಬಿಲ್ಡಿಂಗ್ಸ್‌ನ್ನು ಕಟ್ಟಿ ಮಕ್ಕಳಿಗೂ ಕೂಡ ವ್ಯವಸ್ಥೆಯನ್ನು ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಮಾನ್ಯ ಸಮಾಜ ಕಲ್ಯಾಣ ಸಚಿವರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಆ ಕೆಲಸವನ್ನು ನಾವು ಮಾಡುತ್ತೇವೆ.

ಅಧ್ಯಕ್ಷರು : ಪ್ರಶ್ನೋತ್ತರ ವೇಳೆ ಮುಗಿಯಿತು.

(ii) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾಗದ ಉತ್ತರಗಳು.

ಶ್ರೀ ಹೆಚ್.ಸಿ.ಶ್ರೀ ಕಂಠಯ್ಯ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳ ಹತ್ತನೇ ಪಟ್ಟಿಯಲ್ಲಿರು 205 ಪ್ರಶ್ನೆಗಳ ಪೈಕಿ 129 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ವಿದ್ಯುತ್ ಪ್ರಸರಣನಿಗಮವು ರೈತರ ಪಂಪ್ ಸೆಟ್‌ಗಳಿಗೆ, ಮನೆಗಳಿಗೆ ಹಾಗೂ ಬೀದಿಗಳಿಗೆ ವಿದ್ಯುತ್ ಸಂಪರ್ಕ ನೀಡದಿರುವುದು.

22(9) ಶ್ರೀ ಬಸವಂತ ರೆಡ್ಡಿ ಮೊತಕಪಲ್ಲಿ (ಸೇಡಂ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?